ಶ್ರೀ ಬಿ.ಎಸ್.ಯಡಿಯೂರಪ್ಪ: ನಮ್ಮ ಹಣಕಾಸಿನ ಸಚಿವರು ಮಾಡಬೇಕಾಗಿರುವುದೇನೆಂದರೆ, ಕೆರೆಯ ನೀರನ್ನು ಕೆರೆಗೆ ಚೆಲ್ಲಬೇಕು. ನೀವು ನಿಧಿ ಸಂಗ್ರಹಿಸಿ ಸರ್ಪದಂತೆ ಕಾಯುವುದಕ್ಕಲ್ಲ. ಜನ ಸಾಮಾನ್ಯರು ಕೊಟ್ಟ ತೆರಿಗೆಯನ್ನು ಆದಷ್ಟು ಬೇಗ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸುವುದರ ಮುಖಾಂತರ ಅವರಿಗೆ ತಲುಪಿಸುವಂತಾಗಬೇಕು.

ಶ್ರೀ ಸಿದ್ಧರಾಮಯ್ಯ: ಅದರ ಬಗ್ಗೆ ಕಟ್ಟುನಿಟ್ಟಾಗಿ ಮಾಡುತ್ತಿದ್ದೇವೆ, ನೀವ್ಯಾರೂ ಸಂಶಯ ಇಟ್ಟುಕೊಳ್ಳಬೇಕಾಗಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಕೆರೆಯ ನೀರನ್ನು ಕೆರೆಗೆ ಚೆಲ್ಲಬೇಕೆಂದು ಮಾನ್ಯ ಹಿರಿಯ ಸದಸ್ಯರಾದ ಯಡಿಯೂರಪ್ಪನವರು ಹೇಳಿದರು. ಕೆರೆಗೆ ನೀರು ಬರುವಂತೆ ಸಹ ಮಾಡಿಕೊಳ್ಳಬೇಕಲ್ಲಾ ಆ ವ್ಯವಸ್ಥೆಯಾದರೆ ನೀರು ಚೆಲ್ಲುವುದಕ್ಕೂ ವ್ಯವಸ್ಥೆಯಾಗುತ್ತದೆ. ಕೆರೆಗೆ ನೀರಿಲ್ಲವೆಂದರೆ ಹೇಗೆ?

ಶ್ರೀ ಬಿ.ಎಸ್.ಯಡಿಯೂರಪ್ಪ: ಕೆರೆಯಲ್ಲಿರುವ ಹೂಳು ತೆಗೆದು ನೀರು ನಿಲ್ಲುವಂಥ ವ್ಯವಸ್ಥೆ ಮಾಡಿಕೊಳ್ಳಬೇಕು. ತಾವು ಸಂಪನ್ಮೂಲ ಕ್ರೋಢೀಕರಿಸುವುದರತ್ತ ಗಮನ ಕೊಡುತ್ತಿಲ್ಲ. ಒಂದು ಕಡೆ ಸೋರಿ ಹೋಗುತ್ತಿದ್ದರೆ ಇನ್ನೊಂದು ಕಡೆ ಅಭಿವೃದ್ಧಿ ಕಾರ್ಯಗಳಿಗೆ ಹಣ ಖರ್ಚಾಗುತ್ತಿಲ್ಲ.

ಅಧ್ಯಕ್ಷರು: ರಾಜರ ಕಾಲದ ಕಾಲುವೆಗಳಿವೆಯೆಲ್ಲಾ, ಅವೆಲ್ಲವೂ ಸಿಲ್ಟ್ ಅಪ್ ಆಗಿವೆ.

ಶ್ರೀ ಚಂದ್ರಕಾಂತ ಬೆಲ್ಲದ್: ಕೆರೆ ತುಂಬದೆ ಸಿಕ್ಕಿದ ಕಡೆಗೆ ನೀರು ಹರಿದು ಕೋಡಿ ಹೋಗುತ್ತಿದೆ. ಅದನ್ನು ಬಂದ್ ಮಾಡುವ ಕಡೆಗೆ ಹೆಚ್ಚು ಗಮನ ಕೊಡುತ್ತಿಲ್ಲವೆಂದು ಹೇಳಬೇಕಾಗುತ್ತದೆ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೆ, ಬೆಣ್ಣೆಹಳ್ಳಿ ಸೇತುವೆ ಬಗ್ಗೆ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರು. ಈ ಬೆಣ್ಣೆಹಳ್ಳಿ ಸೇತುವೆ 10 ಎಕನಾಮಿಕಲಿ ಇಂಪಾರ್ಟೆಂಟ್ ರಸ್ತೆಗಳಲ್ಲಿ ಒಂದಾಗಿದ್ದು ಕೇಂದ್ರ ಸರ್ಕಾರದಿಂದ ಮಂಜೂರಾಗಿರುವಂಥ ರಸ್ತೆಗಳಲ್ಲಿ ಸದರಿ ಸೇತುವೆ ಕಾಮಗಾರಿಯೂ ಆಗಬೇಕಾಗಿದೆ. ಈ ರಸ್ತೆಯಲ್ಲಿ ಸುಮಾರು ಒಂದು ಕೋಟಿ 78 ಲಕ್ಷ ರೂಪಾಯಿಗಳ ಸೇತುವೆ ಕಾಮಗಾರಿ ಆಗಬೇಕಾಗಿರುವುದರಿಂದ ಡೀಟೆಲ್ ಸರ್ವೆ ನಡೆಯುತ್ತಿದೆ. ಇದಾದ ನಂತರ ಸದರಿ ಕೆಲಸವನ್ನು ತೆಗೆದುಕೊಳ್ಳುವುದಾಗಿ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ವಿಷಯ: ಪಾಂಡವಪುರದಲ್ಲಿ ರಸ್ತೆಗಳ ಅಭಿವೃದ್ಧಿ

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ಪಾಂಡವಪುರ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಎಷ್ಟು ಕಿಮೀ. ರಸ್ತೆ ಅಭಿವೃದ್ಧಿ ಮಾಡಲಾಗಿದೆ. ಮತ್ತು 1997-98ನೇ ಸಾಲಿಗೆ ಎಷ್ಟು ಕಿಮೀ. ರಸ್ತೆಯನ್ನು ಅಭಿವೃದ್ಧಿ ಮಾಡಲು ಗುರುತಿಸಲಾಗಿದೆ.

ಆ) 1996-97ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ತಾಲೂಕಿನ ಅಭಿವೃದ್ಧಿ ಕೆಲಸಗಳಿಗೆ ಬಿಡುಗಡೆಯಾದ ಹಣ ಎಷ್ಟು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಪಾಂಡವಪುರ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯ ವತಿಯಿಂದ 1996-97ನೇ ಸಾಲಿನಲ್ಲಿ 23.35 ಕಿಮೀ.ಉದ್ದ ರಸ್ತೆ ಅಭಿವೃದ್ಧಿ ಮಾಡಿದೆ. ಇದರಲ್ಲಿ 9.60 ಕಿ.ಮೀ. ಉದ್ದ ಜೆಲ್ಲಿ ರಸ್ತೆ ಹಾಗೂ 13.75 ಕಿ.ಮೀ.ಉದ್ದ ಡಾಂಬರೀಕರಣದ ಕೆಲಸಗಳನ್ನು ಪೂರ್ಣಗೊಳಿಸಲಾಗಿರುತ್ತದೆ. 1997-98ನೇ ಸಾಲಿನಲ್ಲಿ ಈ ಕ್ಷೇತ್ರದಲ್ಲಿ ವಿವಿಧ ಲೆಕ್ಕ ಶೀರ್ಷಿಕೆಯ 6 ಕಿ.ಮೀ. ಉದ್ದ ರಸ್ತೆಯ ಜೆಲ್ಲಿ ಕಾಮಗಾರಿ, 16 ಕಿಮೀ. ರಸ್ತೆ ವಿಸ್ತರಿಸುವ ಜೆಲ್ಲಿ ಕಾಮಗಾರಿ, 22.50 ಕಿಮೀ. ಡಾಂಬರೀಕರಣ ಹಾಗೂ 16 ಕಿಮೀ. ರಸ್ತೆ ವಿಸ್ತರಿಸಿ ಡಾಂಬರೀಕರಣಗೊಳಿಸಲು ಉದ್ದೇಶಿಸಲಾಗಿದೆ. (ಒಟ್ಟು 60.50 ಕಿಮೀ.)

ಆ) 1996-97ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ರೂ.56.99 ಲಕ್ಷಗಳನ್ನು ತಾಲೂಕಿನ ಅಭಿವೃದ್ಧಿ ಕೆಲಸಗಳಿಗಾಗಿ ಬಿಡುಗಡೆಗೊಳಿಸಲಾಗಿರುತ್ತದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ರಸ್ತೆಗಳಿಗೆ ಸಂಬಂಧಿಸಿದಂತೆ ನಾರ್ಮ್ಸ್ ಬಗ್ಗೆ ಸಚಿವರು ತಮ್ಮ ಉತ್ತರದಲ್ಲಿ ಏನು ಮಾಹಿತಿ ಕೊಟ್ಟಿದ್ದಾರೆ, ನಮ್ಮ ತಾಲ್ಲೂಕಿನಲ್ಲಿ 59 ಲಕ್ಷ ರೂಪಾಯಿಗಳಷ್ಟು ಮಾತ್ರ ಕೆಲಸ ಮಾಡಿದ್ದಾರೆ. ಈ ನಾರ್ಮ್ಸ್ ಅನ್ನು ಬದಲಾವಣೆ ಮಾಡದಿದ್ದರೆ, ಯಾವುದೇ ರಸ್ತೆಗಳನ್ನು ದುರಸ್ತಿ ಮಾಡುವುದಕ್ಕೆ ಸಾಧ್ಯವಿಲ್ಲ. ತಾವು 12 ಎಂಎಂ, 20 ಎಂಎಂ ಕೊಟ್ಟು ಯಾವುದೇ ಟ್ರೆಂಚ್ ಇಲ್ಲದಂತೆ ರಸ್ತೆಯ ಕೆಲಸ ಮಾಡಿದರೆ ಕೇವಲ 3-4 ತಿಂಗಳುಗಳಲ್ಲಿ ಆ ರಸ್ತೆಗಳಲ್ಲಿ ಗುಂಡಿಗಳಾಗಿ ಯಥಾಸ್ಥಿತಿಗೆ ಬರುತ್ತದೆ. ಈಗ ಎಲ್ಲಾ ಕ್ಷೇತ್ರಗಳಲ್ಲೂ ರಸ್ತೆಗಳು ಭಾರಿ ಗೊಂದಲವಾಗಿದೆ. ಯಾವ್ಯಾವ ತರಹದ ರಸ್ತೆಗಳಿವೆಯೆಂದರೆ, ಪಿಡಬ್ಲ್ಯೂಡಿ ರಸ್ತೆ, ಇರಿಗೇಷನ್ ಟ್ರಾಕ್ ರೋಡ್, ಎಪಿಎಂಸಿ ರೋಡ್, ಶುಗರ್ ಸೆಸ್ ರೋಡ್, ಕಾಡಾ ರೋಡ್, ಮಲೆನಾಡು ಅಭಿವೃದ್ಧಿ ರಸ್ತೆ ಮುಂತಾದ 8-10 ತರಹದ ರಸ್ತೆಗಳಿವೆ. ಕೆಲವು ರಸ್ತೆಗಳು ಯಾವ್ಯಾವುದು ಯಾರ್ಯಾರಿಗೆ ಸೇರಿದೆಯೆಂದು ಗೊತ್ತಾಗದಿರುವುದರಿಂದ ಒಂದು ರಸ್ತೆ ಪ್ರಾಧಿಕಾರ ರಚಿಸಿಕೊಂಡು ಎ, ಬಿ, ಸಿ ಎಂದು ಬೈಫರ್‌ಕೇಷನ್ ಮಾಡಿಕೊಂಡು ಪರ್‌ಫೆಕ್ಟಾಗಿ ಯಾವ್ಯಾವ ರಸ್ತೆಗಳನ್ನು

ಯಾರ್ಯಾರು ಮೇನ್‌ಟೇನ್ ಮಾಡಬೇಕೆಂಬ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕು. ಮಾನ್ಯ ಹಣಕಾಸು ಸಚಿವರ ಗಮನಕ್ಕೆ ತರುವುದಾದರೆ ರಸ್ತೆಗಳು ಅತ್ಯಂತ ಗೊಂದಲವಾಗಿದೆ. ಮೇಲೆ ನೀರು ಹೋದರೆ ಕೆಳಗಡೆ ಸೇತುವೆ, ಇದು ಹೇಮಾವತಿಯದಾಗಿದ್ದು, ಮೇಲೆ ನೀರು ಹರಿದು ಸೇತುವೆ ಬಿದ್ದು ಹೋದರೆ ಜಿಲ್ಲಾ ಪರಿಷತ್‌ನವರು ಇದು ನಮಗೆ ಸಂಬಂಧಪಡುವುದಿಲ್ಲವೆಂದು ಹೇಳುತ್ತಾರೆ, ಹೇಮಾವತಿ ನದಿಗೆ ಸಂಬಂಧಿಸಿದ ಇಲಾಖೆಯವರನ್ನು ಕೇಳಿದರೆ ಇನ್ನೊಬ್ಬರಿಗೆ ಸಂಬಂಧಪಟ್ಟದ್ದು ಎಂದು ಹೇಳುತ್ತಾರೆ. ಆದುದರಿಂದ, ಒಂದು ರಸ್ತೆ ಪ್ರಾಧಿಕಾರ ಮಾಡಬೇಕು. ನಾವು ಗಂಭೀರವಾಗಿ ಇಷ್ಟೊಂದು ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಬೇಕಾದರೆ ಪ್ರಮುಖವಾಗಿರತಕ್ಕಂಥ ರಸ್ತೆಗಳ ಕೆಲಸವನ್ನು 12 ಎಂಎಂ ಮತ್ತು 20 ಎಂಎಂ ನಾರ್ಮ್ಸ್‌ನಲ್ಲಿ ಇಷ್ಟೊಂದು ವಾಹನ ಸಂಚಾರದ ದಟ್ಟಣೆ ಮಧ್ಯೆ ಪಿಡಬ್ಲ್ಯೂಡಿ ರಸ್ತೆ ಮಾಡಿಸಿದರೆ ಏನೂ ಪ್ರಯೋಜನವಾಗುವುದಿಲ್ಲ. ಈಗ ಡಾಂಬರೀಕರಣವಾದ ರಸ್ತೆಗಳೆಲ್ಲವೂ ಹಾಳಾಗಿರುವುದು ನೀರಿನಿಂದ. ಆದುದರಿಂದ, ಎಲ್ಲೆಲ್ಲಿ ಅಗತ್ಯವಿದೆಯೋ ಅಲ್ಲಲ್ಲಿ ಟ್ರೆಂಚ್ಸ್ ಮಾಡುವುದಕ್ಕೆ ತೀರ್ಮಾನ ತೆಗೆದುಕೊಳ್ಳದಿದ್ದರೆ ತಾವು ಮಾಡಿರುವ ರಸ್ತೆಗಳೆಲ್ಲವೂ ವ್ಯರ್ಥವಾಗುತ್ತವೆಯಾದ್ದರಿಂದ ಇದನ್ನು ಪರಿಶೀಲಿಸಿ ಒಂದು ನಿಲುವಿಗೆ ಬಂದರೆ ಪಿಡಬ್ಲ್ಯೂಡಿ ರಸ್ತೆ ಉಪಯೋಗವಾಗುತ್ತದೆ, ಇಲ್ಲದಿದ್ದರೆ ಲೋಕೋಪಯೋಗಿ ಅಪಯೋಗಿ ಇಲಾಖೆಯಾಗಿಯೇ ಉಳಿದುಕೊಳ್ಳುತ್ತದೆ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆ ಅತ್ಯಂತ ಅವಶ್ಯಕವಾಗಿದ್ದು ನಾವು ಇದನ್ನು ಇವೊತ್ತು ಗಮನಿಸಬೇಕಾಗಿದೆಯೆಂದು ಭಾವಿಸಿಕೊಂಡಿದ್ದೇನೆ. ರಾಜ್ಯ, ಜಿಲ್ಲಾ ಮತ್ತು ರಾಷ್ಟ್ರೀಯ ಹೆದ್ದಾರಿಗಳನ್ನು ವಿಭಿನ್ನ ಶೈಲಿಯಲ್ಲಿ ನಿರ್ಮಾಣ ಮಾಡುವುದರ ಜೊತೆಗೆ ಮಳೆ ಹಾಗೂ ವಾಹನ ಸಂಚಾರ ಸಾಂದ್ರತೆಯನ್ನು ಗಮನದಲ್ಲಿಟ್ಟುಕೊಂಡು ಹಾಗೂ ನೀರಾವರಿ ಪ್ರದೇಶಗಳನ್ನೂ ಸಹ ಗಮನಿಸಿ ನಾವು ಮಾಡಬೇಕಾದಂಥ ಕೆಲಸದಲ್ಲಿ ಕೆಲವು ಬದಲಾವಣೆಗಳನ್ನು ತರದಿದ್ದರೆ ರಸ್ತೆಗಳ ಅಭಿವೃದ್ಧಿಗೆ ನಾವು ಎಷ್ಟೇ ಹಣ ಖರ್ಚು ಮಾಡಿದರೂ ಸಹ ನಿರೀಕ್ಷಿಸಿದಷ್ಟು ಪ್ರಮಾಣದಲ್ಲಿ ಪ್ರಗತಿಯಾಗುವುದಿಲ್ಲವೆನ್ನುವ ಮಾತು ಸತ್ಯಕ್ಕೆ ದೂರವಾದುದೆಂದು ನಾನು ನಿಮಗೆ ಹೇಳುತ್ತಿಲ್ಲ. ಆದರೆ, ಏನಾಗಿದೆಯೆಂದರೆ, ಒಂದು ಕಿಲೋಮೀಟರ್‌ಗೆ 10-15 ಲಕ್ಷ ರೂಪಾಯಿಗಳವರೆಗೂ ಖರ್ಚು ಮಾಡಬೇಕಾದ ಕೆಲವು ರಸ್ತೆಗಳಿವೆ. ಉದಾಹರಣೆಗೆ, ಬೆಂಗಳೂರು-ಹೊಸೂರು ರಸ್ತೆಯಲ್ಲಿ ಒಂದು ಕಿಲೋಮೀಟರ್‌ಗೆ ಐವತ್ತು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ನಾವು ಖರ್ಚು ಮಾಡಿದ್ದೇವೆ. ಅದೇ ರೀತಿ ಹುಬ್ಬಳ್ಳಿ-ಅಂಕೋಲದ ಒಂದು ಕಿಲೋಮೀಟರ್ ರಸ್ತೆಗೆ 65 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಎಲ್ಲಾ ಕಡೆಗಳಲ್ಲಿರುವ ರಸ್ತೆಗಳ ಅಭಿವೃದ್ಧಿಗೆ ಹಣಕಾಸಿನ ಲಭ್ಯತೆ ಮೇಲೆ ಆಗಿಲ್ಲದಿರುವುದರಿಂದ ಪ್ರಥಮ ಆದ್ಯತೆ ಕೊಡಬೇಕಾದಾಗ ರಸ್ತೆಗಳಿಗೆ ಆದ್ಯತೆ ಕೊಟ್ಟು ಹಣಕಾಸನ್ನು ಒದಗಿಸಬೇಕೆನ್ನುವ ವಿಚಾರದಲ್ಲಿ ಉಳಿದವುಕ್ಕಿಂತ

ಇದಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ನಾವು ಕೆಲಸ ಮಾಡಬೇಕಾಗುತ್ತದೆ. ಈ ರೀತಿ ಮಾಡಿದರೆ ನಿರೀಕ್ಷಿತ ಪ್ರಮಾಣದಲ್ಲಿ ಸುಲಭವಾಗಿ ಕೆಲಸ-ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ನಾನು ಮಾನ್ಯ ಸದಸ್ಯರ ಸಲಹೆಯನ್ನು ಗಂಭೀರವಾಗಿ ಪರಿಶೀಲಿಸಿ ಮುಂದೆ ಮಾಡಬೇಕಾದಂಥ ಯೋಜನೆಯಲ್ಲಿ ಅವರ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುವುದಾಗಿ ಹೇಳಬಯಸುತ್ತೇನೆ.

ವಿಷಯ: ಮುಧೋಳ ತಾಲ್ಲೂಕಿನ ಲೋಕಾಪುರ-ಯರವಾಡದಲ್ಲಿನ ಹಾನಿಗೊಂಡ ರಸ್ತೆ ಕುರಿತು.

524 (3882)

ಶ್ರೀ ಗೋವಿಂದ ಎಂ.ಕಾರಜೋಳ (ಮುಧೋಳ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಧೋಳ್ ತಾಲ್ಲೂಕಿನ ಲೋಕಾಪುರ ಯಾಡವಾಡ ರಸ್ತೆ ಕೆಟ್ಟ ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ದುರಸ್ತಿ ಕಾರ್ಯಕೈಗೊಳ್ಳಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕಪಯೋಗಿ ಸಚಿವರು):

ಅ) ಈ ರಸ್ತೆಯ ಒಟ್ಟಾರೆ 21 ಕಿಮೀ.ನಲ್ಲಿ 16 ಕಿಮೀ. ಜಲ್ಲಿ ರಸ್ತೆಯಾಗಿದ್ದು, 5 ಕಿ.ಮೀ. ಡಾಂಬರು ಮಾಡಲಾಗಿದೆ. ಈ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ತೊಂದರೆಯಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

11.40 ಎ.ಎಂ

ಶ್ರೀ ಗೋವಿಂದ ಎಂ.ಕಾರಜೋಳ: ಮಾನ್ಯ ಅಧ್ಯಕ್ಷರೆ, ಈ ರಸ್ತೆಯ ಒಟ್ಟಾರೆ 21 ಕಿ.ಮೀ.ನಲ್ಲಿ 16 ಕಿ.ಮೀ. ಜಲ್ಲಿ ರಸ್ತೆಯಾಗಿದ್ದು ಉಳಿದ 5 ಕಿ.ಮೀ. ರಸ್ತೆಯನ್ನು ಡಾಂಬರೀಕರಣ ಮಾಡಲಾಗಿದೆಯೆಂದು ಉತ್ತರಕೊಟ್ಟಿದ್ದಾರೆ. ಇನ್ನು 16 ಕಿ.ಮೀ. ಡಾಂಬರೀಕರಣ ಮಾಡಿಲ್ಲವೆಂದು ಒಪ್ಪಿಕೊಂಡಿದ್ದಾರೆ. ಆದರೆ ರಸ್ತೆ ವಾಹನ ಸಂಚಾರಕ್ಕೆ ಚೆನ್ನಾಗಿದೆಯೆಂದು ಏನು ಉತ್ತರಕೊಟ್ಟಿದ್ದಾರೆ ಅದು ಸರಿಯಲ್ಲ. ಅಲ್ಲಿ ವಾಹನಗಳ ಸಂಚಾರಕ್ಕೆ ಬಹಳ ತೊಂದರೆಯಾಗಿದೆ. ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗೆ ಅದೊಂದು ಬಹಳ ಪ್ರಮುಖವಾದ ರಸ್ತೆ. ಆ 16 ಕಿ.ಮೀ. ಡಾಂಬರೀಕರಣ ಮಾಡದ ಹೊರತು ಅಲ್ಲಿ ವಾಹನಗಳ ಸಂಚಾರಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಈಗಾಗಲೇ